## ನಿವೇದನೆ

# ಗ್ರಾಮೀಣರ ಆತ್ಮಬಲ ವೃದ್ಧಿಗೆ ಪಣತೊಡಿ

ಜನಪ್ರತಿನಿಧಿಗಳು, ಅಧಿಕಾರಿಗಳು ಜನಸಾಮಾನ್ಯರ ಬಳಿಗೆ ಹೋಗಬೇಕೆನ್ನುವುದು ಸರಿ. ಆದರೆ, ಆ ಪ್ರಕ್ರಿಯೆಯು ತೋರಿಕೆಯ ಪ್ರದರ್ಶನ ಹಾಗೂ ದುಬಾರಿ ಕಸರತ್ತು ಆಗಬಾರದು. ಅಧಿಕಾರಿಗಳಿಗೆ ಬೇಕಿರುವುದು ಅಂತಃಕರಣ, ಪ್ರಾಮಾಣಿಕತೆ, ಕರ್ತವ್ಯದ ಬದ್ಧತೆ. ಆದರೆ ಅವುಗಳ ಜಾಗದಲ್ಲಿ ಅಹಂಕಾರ, ಲಂಚಗುಳಿತನ ಮತ್ತು ಹೊಣೆಗೇಡಿತನ ಸೇರಿಕೊಂಡಿವೆ.

ಗ್ರಾಮ ವಾಸ್ತವ್ಯದ ಪರಿಕಲ್ಪನೆ ಕರ್ನಾಟಕದ ಮಟ್ಟಿಗೆ ಹೊಸದಲ್ಲ. ಜನಸಾಮಾನ್ಯರ ಮನೆಬಾಗಿಲಿಗೆ ಹೋಗಿ ಅವರ ಕಷ್ಟಸುಖಗಳನ್ನು ಆಲಿಸುವುದು ಹಾಗೂ ಜನರ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ದೊರಕಿಸಿಕೊಡುವುದು ಈ ಪರಿಕಲ್ಪನೆಯ ಮುಖ್ಯ ಉದ್ದೇಶ. ಎಚ್.ಡಿ. ಕುಮಾರಸ್ವಾಮಿ ಅವರು ಮೊದಲ ಸಲ ಮುಖ್ಯಮಂತ್ರಿಯಾಗಿದ್ದಾಗ ಈ ಕಾರ್ಯಕ್ರಮ ಹೆಚ್ಚು ಪ್ರಚಾರ ಪಡೆದಿತ್ತು. ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದಾಗಲೂ ಅವರು ಗ್ರಾಮಗಳಿಗೆ ಹೋಗಿ, ಅಲ್ಲಿನ ಸರ್ಕಾರಿ ಶಾಲೆಗಳಲ್ಲಿ ವಾಸ್ತವ್ಯ ಹೂಡಿದ್ದರು. ಮುಖ್ಯಮಂತ್ರಿಯಾದವರು ಜನಸಾಮಾನ್ಯರ ಬಳಿಗೆ ಹೋಗಬೇಕೆನ್ನುವ ಕಾಳಜಿ ಮೆಚ್ಚುವಂತಹುದು. ಆದರೆ, ಇದರ ಪ್ರಯೋಜನವನ್ನು ಸ್ಫೂರ್ತಿಯ ನೆಲೆಯಲ್ಲಿ ನೋಡಬೇಕೆ ವಿನಾ ಪ್ರಾಯೋಗಿಕ ನೆಲೆಯಲ್ಲಿ ಅಲ್ಲ. ಪರಿಹಾರೋಪಾಯದ ಕಾಯಂ ಮಾದರಿಯಂತೂ ಅಲ್ಲವೇ ಅಲ್ಲ.

ಗ್ರಾಮ ವಾಸ್ತವ್ಯದ ಈ ಪರಿಕಲ್ಪನೆಯು ರಾಜ್ಯದಲ್ಲಿ ಈಗ ಮಗ್ಗುಲು ಬದಲಿಸಿದೆ. ಜನಪ್ರತಿನಿಧಿಗಳ ಜಾಗಕ್ಕೆ ಅಧಿಕಾರಿಗಳು ಬಂದಿದ್ದಾರೆ. ರಾತ್ರಿ ವೇಳೆ ಹಳ್ಳಿಗಳಲ್ಲಿ ತಂಗುವ ಬದಲು, ಹಗಲು ಹೊತ್ತಿನಲ್ಲಿ ಅಂದರೆ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ಹಳ್ಳಿಗಳಲ್ಲಿ ಬಿಡಾರ ಹೂಡಿ, ಗ್ರಾಮಸ್ಥರ ಅಳಲಿಗೆ ಕಿವಿಗೊಡಲಿದ್ದಾರೆ. ‘ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ’ ಹೆಸರಿನ ಈ ಕಾರ್ಯಕ್ರಮ ಪ್ರತೀ ತಿಂಗಳ ಮೂರನೇ ಶನಿವಾರ ಜರುಗಲಿದೆ. ಜಿಲ್ಲಾಧಿಕಾರಿ, ತಹಶೀಲ್ದಾರ್, ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಿಗರು, ಭೂದಾಖಲೆಗಳ ಉಪನಿರ್ದೇಶಕರು... ಇವರೆಲ್ಲ ಸ್ಥಳದಲ್ಲಿ ಖುದ್ದು ಹಾಜರಿದ್ದು, ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ದೊರಕಿಸಿಕೊಡಲಿದ್ದಾರೆ. ಹಾಗಂತ ಕಂದಾಯ ಸಚಿವರು ಹೇಳಿದ್ದಾರೆ. ಆಶಯ ಒಳ್ಳೆಯದೇ. ಸಾಧ್ಯಾಸಾಧ್ಯತೆಯ ನೈಜಚಿತ್ರಣ ಒಂದೆರಡು ತಿಂಗಳು ಕಳೆದ ನಂತರ ಗೊತ್ತಾಗಲಿದೆ.

ಗ್ರಾಮ ವಾಸ್ತವ್ಯದ ವೇಳೆ ಜನರಿಂದ ಅಧಿಕಾರಿಗಳು ಅರ್ಜಿಗಳನ್ನು ಸಂಗ್ರಹಿಸಬೇಕು. ಪಿಂಚಣಿ, ವಿಧವಾ ವೇತನ, ಬಿಪಿಎಲ್ ಕಾರ್ಡ್, ಆಶ್ರಯ ಮನೆ, ಆಧಾರ್ ಕಾರ್ಡ್, ಮತದಾರರ ಪಟ್ಟಿ, ಸರ್ಕಾರಿ ಜಮೀನು ಒತ್ತುವರಿ... ಇವೇ ಮೊದಲಾದವುಗಳಿಗೆ ಸಂಬಂಧಿಸಿದ ಆಹವಾಲುಗಳ ಬಗ್ಗೆ ಪರಿಶೀಲಿಸಬೇಕು ಎಂದು ಸಚಿವರು ಹೇಳಿದ್ದಾರೆ. ಕಾರ್ಡ್‌ಗಳನ್ನು ಮಾಡಿಸಿಕೊಳ್ಳುವುದೇ ನಮ್ಮಲ್ಲಿ ದೊಡ್ಡ ಸವಾಲಿನ ಕೆಲಸವಾಗಿದೆ. ಪಡಿತರ ಚೀಟಿ ಗೊಂದಲವು ಕಗ್ಗಂಟಾಗಿ ಕೂತಿದೆ. ಆಧಾರ್ ಕಾರ್ಡ್‌ಗೆ ಸರದಿಸಾಲಿನಲ್ಲಿ ನಿಲ್ಲುವುದು ಇನ್ನೂ ತಪ್ಪಿಲ್ಲ. ಇಂತಹ ಕ್ಷುಲ್ಲಕ ಕೆಲಸಗಳಿಗೆ ಜನರು ಕಚೇರಿಯಿಂದ ಕಚೇರಿಗೆ ಅಲೆಯುವಂತಾಗಿರುವುದು ನಮ್ಮ ಆಡಳಿತ ವ್ಯವಸ್ಥೆಯು ಅವಸಾನಮುಖಿಯಾಗಿರುವುದನ್ನು ತೋರಿಸುತ್ತದೆ. ತೋರಿಕೆಗೆ ಡಿಜಿಟಲ್ ಯುಗ. ನೌಕರರ ಮನಃಸ್ಥಿತಿ ಮಾತ್ರ ‘ಪೀಡನೆ’ಯ ಪರಿಧಿಯಿಂದ ಆಚೆ ಬಂದಿಲ್ಲ. ಅದರ ಫಲವೇ ಇಂತಹ ವಾಸ್ತವ್ಯಗಳ ಅಗತ್ಯ.

ಜನಪ್ರತಿನಿಧಿಗಳು, ಅಧಿಕಾರಿಗಳು ಜನಸಾಮಾನ್ಯರ ಬಳಿಗೆ ಹೋಗಬೇಕೆನ್ನುವುದು ಸರಿ. ಆದರೆ, ಆ ಪ್ರಕ್ರಿಯೆಯು ತೋರಿಕೆಯ ಪ್ರದರ್ಶನ ಹಾಗೂ ದುಬಾರಿ ಕಸರತ್ತು ಆಗಬಾರದು. ಅಧಿಕಾರಿಗಳಿಗೆ ಬೇಕಿರುವುದು ಅಂತಃಕರಣ, ಪ್ರಾಮಾಣಿಕತೆ, ಕರ್ತವ್ಯದ ಬದ್ಧತೆ. ಆದರೆ ಅವುಗಳ ಜಾಗದಲ್ಲಿ ಅಹಂಕಾರ, ಲಂಚಗುಳಿತನ ಮತ್ತು ಹೊಣೆಗೇಡಿತನ ಸೇರಿಕೊಂಡಿವೆ. ತಾವು ಜನಸೇವಕರು ಎಂಬ ಮೂಲಮಂತ್ರವನ್ನೇ ಮರೆತಂತಿರುವ ನೌಕರಶಾಹಿಯ ಮನೋಧೋರಣೆ ಬದಲಾದರೆ ಮಾತ್ರ ಜನರ ಅಲೆದಾಟಕ್ಕೆ ಪೂರ್ಣವಿರಾಮ ಬೀಳಬಹುದು. ಅದನ್ನು ಸಾಧ್ಯವಾಗಿಸುವುದು ಹೇಗೆ ಎಂಬುದರ ಬಗೆಗೆ ನಮ್ಮ ಸರ್ಕಾರಗಳು ಗಂಭೀರವಾಗಿ ಯೋಚಿಸದಿರುವುದು ದುರದೃಷ್ಟಕರ.

ನಮ್ಮ ಅಭಿವೃದ್ಧಿ ನೀತಿಗಳು ನಗರ ಪಕ್ಷಪಾತಿಯಾಗಿವೆ. ಅಭಿವೃದ್ಧಿ ಸಿದ್ಧಾಂತಗಳು ಗ್ರಾಮೀಣಾಭಿವೃದ್ಧಿಗೆ ಎರಡನೇ ದರ್ಜೆ ಸ್ಥಾನಮಾನ ನೀಡಿವೆ ಎಂಬ ಮಾತಿನಲ್ಲಿ ಸತ್ಯಾಂಶ ಇಲ್ಲದೇ ಇಲ್ಲ. ಈ ಬಗೆಯ ನೀತಿಗಳು ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಮೇಲೆ ಗಾಢವಾದ ಪರಿಣಾಮ ಬೀರಿವೆ. ಗ್ರಾಮೀಣ ಅಭಿವೃದ್ಧಿಗೆ ಸರ್ಕಾರ ವಿನಿಯೋಗಿಸುವ ಹಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಲೇ ಇದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವಣ ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆ ಹೆಚ್ಚುತ್ತಲೇ ಇದೆ. ಪರಿಣಾಮವಾಗಿ ಅಲ್ಲಿನ ಜನರ ಬದುಕು ಚಿಂತಾಜನಕ ಸ್ಥಿತಿಯಲ್ಲಿದೆ. ಕೃಷಿ ಅವಸಾನದ ಹಾದಿ ಹಿಡಿದಿದೆ. ರಸ್ತೆ, ವಿದ್ಯುತ್ ಸೌಕರ್ಯ ಕಲ್ಪಿಸಿದರೆ ಸಾಲದು. ಜನರ ಸಾಮರ್ಥ್ಯ ವೃದ್ಧಿಸುವ ಕೆಲಸ ದೊಡ್ಡ ಮಟ್ಟದಲ್ಲಿ ನಡೆಯಬೇಕು. ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು. ಅಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಸೌಕರ್ಯ ವೃದ್ಧಿಗೆ ಆದ್ಯತೆ ಸಿಗಬೇಕು. ಇಂತಹ ಕೆಲಸಗಳು ಯೋಜಿತ ರೂಪದಲ್ಲಿ, ಕಾಲಮಿತಿಯಲ್ಲಿ ಪೂರ್ಣಗೊಂಡರೆ ಗ್ರಾಮೀಣರ ಆತ್ಮಬಲ ಕೊಂಚಮಟ್ಟಿಗಾದರೂ ಹೆಚ್ಚಬಲ್ಲದು.

■ ಎನ್. ಉದಯಕುಮಾರ್



ಈಶ್ವರ್